ಶ್ರೀ ಸಿ. ಸಿ. ಪಾಟೀಲ್: ತಾವು ನನ್ನ ಉತ್ತರವನ್ನು ದಯವಿಟ್ಟು ಆಲಿಸಿರಿ. ಕುಟುಂಬದ ಮುಖ್ಯಸ್ಥರ ಅಥವಾ ಕುಟುಂಬದ ಸದಸ್ಯರ ಹೆಸರು ಬಿಪಿಎಲ್ ಕಾರ್ಡ್‌ನಲ್ಲಿದ್ದರೆ ಸಾಕು.

(ಗೊಂದಲ)

ಶ್ರೀ ಸಿ. ಸಿ. ಪಾಟೀಲ್: ಹೊಸ circular ನಿಂದ ಏನಾದರೂ ತೊಂದರೆ ಆಗಿದ್ದರೆ ನನ್ನ ಗಮನಕ್ಕೆ ತಂದರೆ ಕೂಡಲೇ ಮಾಡಿಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರೆ, ವ್ಯವಸ್ಥೆಯಲ್ಲಿ ಏನು ದೋಷ ಇದೆ, ಅದನ್ನು ಸರಿಪಡಿಸಿ.

ಬೇಲೂರು ನಗರದಲ್ಲಿ ಬಸ್ ಡಿಪೋ ಸ್ಥಾಪನೆ

33 (502) ಶ್ರೀ ರುದ್ರೇಶಗೌಡ ವೈ. ಎನ್. (ಬೇಲೂರು):–ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೇಲೂರು ನಗರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಇಲ್ಲದಿರುವುದು ನಿಜವೇ;

ಆ) ಬೇಲೂರು ಪ್ರವಾಸೋದ್ಯಮ ಕೇಂದ್ರವಾಗಿದ್ದರೂ ಯಾವ ಕಾರಣಕ್ಕಾಗಿ ಬಸ್ ಡಿಪೋ ಮಂಜೂರಾಗಿರುವುದಿಲ್ಲ;

ಇ) ಬಸ್ ಡಿಪೋಗಾಗಿ ಈಗಾಗಲೇ ಜಮೀನು ಖರೀದಿಸಿರುವುದು ನಿಜವೇ?

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–

ಅ) ಹೌದು

ಆ) ಬೇಲೂರು ತಾಲ್ಲೂಕು ಕೇಂದ್ರದಲ್ಲಿ ಬಸ್ ಘಟಕ ನಿರ್ಮಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಮುಂದಿನ ದಿನಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮತ್ತು ಸಾರಿಗೆ ನಿಗಮದ ಆಂತರಿಕ ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಬಸ್ ಘಟಕದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಹೌದು, ಸಾರಿಗೆ ನಿಗಮವು ಬೇಲೂರು ಬಸ್ ಘಟಕ ನಿರ್ಮಾಣಕ್ಕಾಗಿ ಒಟ್ಟು 3 ಎಕರೆ 19 ಗುಂಟೆ ಜಾಗವನ್ನು ದಿನಾಂಕ 24–06–2010 ರಂದು ನಿಗಮದ ವಶಕ್ಕೆ

ಪಡೆದಿರುತ್ತದೆ.

ಶ್ರೀ ವೈ. ಎನ್. ರುದ್ರೇಶಗೌಡ: ಬೇಲೂರು ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಬಸ್ ಡಿಪೋ ಯಾವುದೂ ಇಲ್ಲ. ಬೇಲೂರು ನಗರಕ್ಕೆ ಸಹ ಬಸ್ ಡಿಪೋ ಸೌಕರ್ಯವನ್ನು ಕಲ್ಪಿಸಿರುವುದಿಲ್ಲ. ಬೇಲೂರು ಪ್ರವಾಸೋದ್ಯಮ ಕೇಂದ್ರವಾಗಿರುವುದರಿಂದ world famous chennakeshava temple ಇರುವುದರಿಂದ ಮತ್ತು ಇನ್ನಿತರ ಕಾರಣಗಳಿಂದ ಇಲ್ಲಿ ಬಸ್ ಡಿಪೋ ಮಂಜೂರಾತಿ ಮಾಡಬೇಕೆನ್ನುವ ವಿಚಾರವನ್ನು ಕೇಳಿದ್ದೆವು. ಆದರೆ, ಬೇಲೂರು ತಾಲ್ಲೂಕು ಕೇಂದ್ರದಲ್ಲಿ ಬಸ್ ಘಟಕ ನಿರ್ಮಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಬಸ್ ಡಿಪೋ ತೆರೆಯಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಇಲ್ಲಿಯವರೆಗೆ 20 ಬಾರಿ ಕೇಳಿದ್ದೇವೆ ಮಾನ್ಯ ಮುಖ್ಯಮಂತ್ರಿಯವರಲ್ಲಿ 10 ಬಾರಿ ಕೇಳಿದ್ದೇವೆ KSRTC ಯ MD ಯವರನ್ನು ಸಹ ಕೇಳಿದ್ದೇವೆ. ಇಲ್ಲಿಯವರೆಗೆ ಕರ್ನಾಟಕ ರಾಜ್ಯದ ಐದಾರು ತಾಲ್ಲೂಕುಗಳಲ್ಲಿ ಬಸ್ ಡಿಪೋ ಇಲ್ಲ. ಹಾಗಾಗಿ ನಮ್ಮ ಬೇಲೂರಿನಲ್ಲಿ world famous temple ಇರುವುದರಿಂದ ಇಲ್ಲಿಗೆ ಬಹಳಷ್ಟು ಪ್ರವಾಸಿಗರು ಬಂದುಹೋಗುವುದರಿಂದ ಮತ್ತು ಹೆಚ್ಚು ಬಸ್‌ಗಳು ಓಡಾಡುವುದರಿಂದ ಬಸ್ ಡಿಪೋ ಬೇಕು. ಇಲ್ಲಿ ಬಸ್ ಡಿಪೋ ಮಾಡಬೇಕೆನ್ನುವ ಉದ್ದೇಶಕ್ಕಾಗಿ ಸನ್ಮಾನ್ಯ ಸಾರಿಗೆ ಸಚಿವರು KSRTC ಯವರು ಜಾಗ ಖರೀದಿ ಮಾಡಿದ್ದಾರೆ. 3 ಎಕರೆ 19 ಗುಂಟೆ ಜಾಗವನ್ನು ಖರೀದಿ ಮಾಡಿ, ಬಸ್ ಡಿಪೋಗೋಸ್ಕರ ಭೂಮಿ ಖರೀದಿ ಮಾಡಿದ್ದಾರೆ, ಡಿಪೋವನ್ನು ಸದ್ಯದಲ್ಲಿಯೇ ಕಟ್ಟುತ್ತಾರೆನ್ನುವ ಭಾವನೆ ಬೇಲೂರಿನ ಜನತೆಯಲ್ಲಿದೆ. ಆದರೂ ಸಹ ಇಲ್ಲಿಯವರೆಗೆ ಡಿಪೋ ಸಲುವಾಗಿ ಮಂಜೂರಾತಿಯನ್ನು ಮಾಡಿರುವುದಿಲ್ಲ. ಆದ್ದರಿಂದ, ದಯಮಾಡಿ, ನಮ್ಮ ರಾಜ್ಯದಲ್ಲಿ ಉಳಿದಿರತಕ್ಕಂಥ ಐದಾರು ತಾಲ್ಲೂಕುಗಳಲ್ಲಿ ಮತ್ತು ನನ್ನ ಕ್ಷೇತ್ರವಾದ ಬೇಲೂರು ತಾಲ್ಲೂಕಿಗೆ ಬಸ್ ಡಿಪೋವನ್ನು ಕಡ್ಡಾಯವಾಗಿ ಮಂಜೂರು ಮಾಡಬೇಕೆಂದು ಮಾನ್ಯ ಸಾರಿಗೆ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್ ಅಶೋಕ್: ಮಾನ್ಯ ಸದಸ್ಯರು ಆ ಬೇಡಿಕೆಯನ್ನು ಬಹಳ ದಿನಗಳಿಂದ ಇಟ್ಟಿದ್ದಾರೆ. ಈ ಬೇಡಿಕೆಯನ್ನು STP ಯೋಜನೆಯಡಿಯಲ್ಲಿ ಸರ್ಕಾರದಿಂದ ನಾವು ಈಡೇರಿಸುತ್ತೇವೆ. ಅಲ್ಲಿ ಬಸ್ ಡಿಪೋ ಮಾಡಿಸುತ್ತೇವೆಂದು ಘೋಷಣೆ ಮಾಡುತ್ತಿದ್ದೇನೆ. ಈಗಾಗಲೇ ಅದನ್ನು ಜಾರಿಗೆ ತರುವಂಥದ್ದಕ್ಕೆ ವ್ಯವಸ್ಥೆ ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಈಗಾಗಲೇ ನಾನು ಸೂಚನೆ ಕೊಟ್ಟಿದ್ದೇನೆ. ಈಗಾಗಲೇ ಹಾಸನ ನಗರದಲ್ಲೂ ಸಹ 2ನೇ

ಬಸ್ ಘಟಕವನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಸಿಟಿ ಬಸ್ಸಿನ ವ್ಯವಸ್ಥೆಯನ್ನು ಸಹ ನಾವು ಹಾಸನದಲ್ಲಿ ಮಾಡುತ್ತಿದ್ದೇವೆ. ಆದ್ದರಿಂದ ಇಡೀ ಹಾಸನದಲ್ಲಿ ಬಸ್ ಘಟಕ ಇರಬಹುದು, ಬಸ್ ನಿಲ್ದಾಣ ಇರಬಹುದು, ಇದು ವ್ಯವಸ್ಥಿತವಾಗಿ ನಡೆಯುತ್ತಿದೆ. ಹಾಗಾಗಿ ಮಾನ್ಯ ಸದಸ್ಯರು ಬಹಳ ದಿವಸಗಳಿಂದ ಬಸ್ ಡಿಪೋ ಕೇಳುತ್ತಿದ್ದಾರೆ, ಇವತ್ತು ಅದನ್ನು ಮಂಜೂರು ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ವೈ. ಎನ್. ರುದ್ರೇಶಗೌಡ: ಮಂಜೂರು ಮಾಡುತ್ತೇನೆಂದು ಘೋಷಣೆ ಮಾಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಸಾರಿಗೆ ಸಚಿವರೆ, ನಿಮ್ಮ ಉತ್ತರದಲ್ಲಿ ತಿಳಿಸಿದಂತೆ, ದಿನಾಂಕ 20-06-2010ರಲ್ಲಿಯೇ ಜಮೀನು ಸ್ವಾಧೀನಪಡಿಸಿಕೊಂಡಿದ್ದೀರಿ. ಅಂದರೆ ಬಸ್ ಡಿಪೋ ಮಂಜೂರು ಮಾಡುವ ಸಲುವಾಗಿಯೇ ತೆಗೆದುಕೊಂಡಿದ್ದೀರಿ. ಈ ಜಾಗವನ್ನು ಸುಮ್ಮ ಸುಮ್ಮನೆ ತೆಗೆದುಕೊಂಡಿಲ್ಲ ಅಲ್ಲವೇ? ಆದರೆ, ಕಟ್ಟಡ ಕಟ್ಟುವುದಕ್ಕೆ ನೀವು ಪ್ರಾರಂಭ ಮಾಡಿಲ್ಲ. ಮೊದಲೇ ಬಸ್ ಡಿಪೋ ಮಂಜೂರು ಆಗಿರಬೇಕು. ಮಂಜೂರು ಆಗದೆ ಜಾಗ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಂಜೂರು ಆಗುವುದಕ್ಕೆ ಮುಂಚಿತವಾಗಿಯೇ ಜಾಗ ತೆಗೆದುಕೊಳ್ಳುತ್ತೀರಾ? ನನ್ನ impression ಏನೆಂದರೆ, ಅಲ್ಲಿ ಮಂಜೂರು ಮಾಡಿದ ಮೇಲೆ ಅದಕ್ಕಾಗಿ ಜಾಗ ತೆಗೆದುಕೊಳ್ಳುತ್ತೀರಿ. You have already purchased the land and taken position of it, ಮುಂಚಿತವಾಗಿಯೇ ಮಂಜೂರು ಮಾಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಆದರೆ, ಡಿಪೋ ಕಟ್ಟತಕ್ಕಂಥ ಕೆಲಸ ಆರಂಭವಾಗಿಲ್ಲ. ಅದನ್ನು ಯಾವಾಗ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಹೇಳಿಬಿಡಿ.

ಶ್ರೀ ಆರ್ ಅಶೋಕ್: ಮುಖ್ಯವಾಗಿ ಅಲ್ಲಿಯ services ಏನಿತ್ತು, ಅದು ಹಾಸನ ಮತ್ತು ಚಿಕ್ಕಮಗಳೂರು . . .

ಶ್ರೀ ಸಿದ್ದರಾಮಯ್ಯ: ಜಾಗ ಏಕೆ ತೆಗೆದುಕೊಂಡಿರಿ? What for you have purchased the land? What is the purpose? without any purpose you cannot purchase the land. The purpose is to build the depot. Is it not? Such being the case, you have already approved. When the work is to be started? ಅದನ್ನು ಹೇಳಿಬಿಟ್ಟರೆ ಸಾಕು.

ಶ್ರೀ ಹೆಚ್. ಡಿ. ರೇವಣ್ಣ: ನಾನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುವುದೇನೆಂದರೆ,

District Minister ಸಹ ಸದನದಲ್ಲಿಯೇ ಇದ್ದಾರೆ. ಹಾಸನದಲ್ಲಿ bus stand ಕಟ್ಟುವುದಕ್ಕೋಸ್ಕರ ಕೊಟ್ಟಿರುವ ಜಾಗ, ಕಟ್ಟಡಕ್ಕೆ ಅಲ್ಲಿಗೆ ಹೋಗಿ ಬರುವುದಕ್ಕೆ ರಸ್ತೆ ಇತ್ಯಾದಿ ಬೇಕಾಗುತ್ತದೆ. ತಾವು ಒಂದು ಸಲ ಖುದ್ದಾಗಿ ಹೋಗಿ ನೋಡಿ. ಅದನ್ನು ಯಾರೋ ಖಾಸಗಿಯವರಿಗೆ ಕೊಡುವುದಕ್ಕೆ ತಯಾರಾಗಿದ್ದಾರೆ. ಹಾಸನದ bus stand ನೊಳಗಡೆ ಖಾಸಗಿಯವರು ಹೋಟೆಲ್ ಮತ್ತು ಬಾರ್ ಕಟ್ಟುವುದಕ್ಕೆ permission ಕೊಟ್ಟಿದ್ದಾರೆ ಎಂದು District Minister ರವರ ಅಧ್ಯಕ್ಷತೆಯಲ್ಲಿ ನಡೆಯುವಂಥ ಸಭೆಯಲ್ಲಿಯೇ ನಮ್ಮಲ್ಲ ಶಾಸಕರು ಗಮನಕ್ಕೆ ತಂದರು. ಆವತ್ತು ಆ ಜಾಗಕ್ಕೆ ಎಕರೆಗೆ ಕೇವಲ 5 ಲಕ್ಷ ರೂ. ಕೊಟ್ಟಿರುವಂಥದ್ದಕ್ಕೆ ಇವತ್ತು 5 ಕೋಟಿ ರೂ. ಕೊಟ್ಟಿರೂ ಆ ಜಾಗವನ್ನು ಕೊಡುವುದಿಲ್ಲ. ಅಲ್ಲಿ ತಾವು ದಯಮಾಡಿ ಯಾವುದೇ ಖಾಸಗಿ ಹೋಟೆಲ್ ಆಗಲಿ, ಬಾರ್ ಮಾಡುವುದಕ್ಕೆ ಕೊಡಬೇಡಿ. ಆ ಜಾಗ ರಸ್ತೆಗೆ ಸಹ ಬೇಕಾಗುತ್ತದೆ. ಮುಂದೆ ಅಲ್ಲಿಯೇ Railway station ಬರುತ್ತಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಆ ಜಾಗವನ್ನು ಯಾರಿಗೂ ಕೊಡುವುದು ಬೇಡವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್ ಅಶೋಕ್: ಈಗಾಗಲೇ ಹೇಳಿರುವ ಹಾಗೆ ಬೇಲೂರು ನಗರಕ್ಕೆ ಬಸ್ ಡಿಪೋವನ್ನು ಮಂಜೂರು ಮಾಡುವಂಥದ್ದಕ್ಕೆ ನಾನು ಹೇಳಿದ್ದೇನೆ, STP ಯೋಜನೆ ಅಡಿಯಲ್ಲಿಯೇ sanction ಮಾಡಿದ್ದೇನೆ. ಇನ್ನು, ಮೊದಲೇ ನೀವು ಜಾಗ ತೆಗೆದುಕೊಂಡುಬಿಟ್ಟಿದ್ದೀರಿ, ಈಗ ಸುಮ್ಮನೆ announce ಮಾಡುತ್ತಿದ್ದೀರಿ ಎಂದು ಸಿದ್ದರಾಮಣ್ಣನವರು ಒಂದು relevant ಪ್ರಶ್ನೆಯನ್ನು ಕೇಳಿದರು. ನಮ್ಮಲ್ಲಿ bus feeders ಏನಿದೆ, ಸುಮಾರು 400 ಬಸ್ ಇದ್ದರೆ ಮಾತ್ರ ನಾವು ಬಸ್ ಡಿಪೋ ಮಾಡುವುದಕ್ಕೆ ಅವಕಾಶವಿರುವುದು.

ಶ್ರೀ ಸಿದ್ದರಾಮಯ್ಯ: ನಾನು ಸಹ ಸಾರಿಗೆ ಸಚಿವನಾಗಿ ಕೆಲಸ ಮಾಡಿದ್ದೇನೆ. ನನಗೇ ಹೇಳಿಕೊಟ್ಟರೆ ಹೇಗೆ? ಆಯಿತು, ಇಂಥ ದಿವಸ ಕೆಲಸ ಪ್ರಾರಂಭ ಮಾಡಿ ಕಟ್ಟಿಕೊಡುತ್ತೇವೆಂದು ಅವರಿಗೆ ಹೇಳಿಬಿಡಿ.

ಶ್ರೀ ಆರ್ ಅಶೋಕ್: ನಾನು ಈಗಾಗಲೇ ಹೇಳಿದ ಹಾಗೆ STP ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಇನ್ನು, ರೇವಣ್ಣನವರು ಬಾರ್‌ಗೆ ಜಾಗ ಕೊಡಬೇಡಿ ಎಂದು ಪ್ರಸ್ತಾಪ ಮಾಡಿದರು. ಬಾರ್‌ಗೆ ಅಲ್ಲಿ ಜಾಗ ಕೊಡುವಂಥ ಪ್ರಸ್ತಾಪ ನಮ್ಮದೇನೂ ಇಲ್ಲ.

ಶ್ರೀ ವೈ. ಎನ್. ರುದ್ರೇಶಗೌಡ: ತಮಗೆ ಗೊತ್ತಿರುವ ಹಾಗೆ ಕೆಲವು bus stand ಗಳು Taluk Head quarters ನಲ್ಲಿ ಅರ್ಧ ಎಕರೆ ಪ್ರದೇಶದಲ್ಲಿವೆ. ನಮ್ಮ ಬೇಲೂರಿನಲ್ಲಿ ಸಹ ಕೇವಲ ಅರ್ಧ ಎಕರೆ ಜಾಗದಲ್ಲಿ bus stand ಇರುವಂಥದ್ದು. ಅಂದರೆ, bus stand 20 ಚದರ building ಇರುತ್ತದೆ. ಅದರಲ್ಲಿಯೇ ಪೆಟ್ಟಿಗೆ ಅಂಗಡಿ, ಅದರಲ್ಲಿಯೇ ಹೋಟೆಲ್ ನಿರ್ಮಾಣ, ಅದರಲ್ಲಿಯೇ telephone booth ಇವೆ. ಅಲ್ಲಿ ಇವೆಲ್ಲ facility ಏಕೆ ಬೇಕು? ಅಲ್ಲಿ ಜನರಿಗೇ ಓಡಾಡಲು ಜಾಗವಿಲ್ಲ, ಅಂಥದ್ದರಲ್ಲಿ ಅಲ್ಲಿ ಅಂಗಡಿ ಏಕೆ? ನಾನು ಮಂತ್ರಿಯವರಿಗೆ ಹೇಳುವುದೇನೆಂದರೆ, ಅಲ್ಲಿರುವ ಅಂಗಡಿಗಳನ್ನು ತೆಗೆಸಿ, ಅಲ್ಲಿ ಯಾವುದೇ ಕಾರಣಕ್ಕೂ ಬೇಡ. ಅಲ್ಲಿ ಜನರು ಓಡಾಡುವುದಕ್ಕೆ ಜಾಗವಿಲ್ಲ. ಎಲ್ಲೆಲ್ಲಿ ಅರ್ಧ ಎಕರೆ ಒಳಗಡೆ bus stand ಇದೆಯೋ ಅದನ್ನು ತಾವು ನಿಲ್ಲಿಸಿ ಬೇರೆ ಕಡೆ ಎಲ್ಲಾದರೂ ಬೇಲೂರು town ನಲ್ಲಿ ಮಾಡಿ. ಬೇಲೂರು town ನಲ್ಲೂ ಕೇವಲ ಅರ್ಧ ಎಕರೆ ಜಾಗದಲ್ಲಿ bus stand ಇದೆ. ತಾವು ಇದರ details ತರಿಸಿಕೊಳ್ಳಿ. ಅರ್ಧ ಎಕರೆ ಜಾಗದಲ್ಲಿ ಮಾತ್ರ bus stand ನಿರ್ಮಾಣ ಮಾಡಿದರೆ ಪ್ರತಿ ವರ್ಷ ಒಂದೆರಡು accident ಗಳು ಆಗುತ್ತಿರುತ್ತವೆ.

ಉಪಾಧ್ಯಕ್ಷರು: ರುದ್ರೇಶ್ ಗೌಡರವರೆ, ಸಾಕಷ್ಟು ಅವಕಾಶ ಕೊಟ್ಟಿದ್ದೇವೆ. ತಮ್ಮ ಸಲಹೆ ಪರಿಶೀಲಿಸಿ ಅಷ್ಟೆ.

ವಿದ್ಯಾರ್ಥಿನಿಯರಿಗೆ ಹಾಸ್ಟೆಲ್

34 (205) ಶ್ರೀ ರಾಮಸ್ವಾಮಿಗೌಡ ಬಿ. ಬಿ. (ಕುಣಿಗಲ್):–ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ಪಟ್ಟಣಕ್ಕೆ ಅತಿ ತುರ್ತಾಗಿ ಒಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿ ನಿಲಯದ ಹಾಸ್ಟೆಲ್‌ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಹಾಸ್ಟೆಲ್ ಮಂಜೂರಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–

ಅ) ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ